**ಅಸಲು ದಾವಾ ಸಂಖ್ಯೆ: 573/2026**

**ಪಿಡಬ್ಲೂ -1**

**ದಿಃ 27-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ. DGB ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

3ನೇ ಪ್ರತಿವಾದಿ ನೀಡಿದ ಹಿಂಬರಹ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು,

ನನ್ನ ಅಣ್ಣ ಸಂತೋಷ ಶಾಮರಾವ ಕುಲಕರ್ಣಿ ರವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-2 ಎಂದು,

ನನ್ನ ತಂದೆ ಶಾಮರಾವ ರವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-3 ಎಂದು,

ನನ್ನ ತಾಯಿ ಸ್ನೇಹಲ್ ಶಾಮರಾವ ಕುಲಕರ್ಣಿ ರವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-4 ಎಂದು,

ನನ್ನ ತಾಯಿ ಸ್ನೇಹಲ್ ಶಾಮರಾವ ಕುಲಕರ್ಣಿ ರವರ ವಾರಸುದಾರರ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-5 ಎಂದು,

ಸ್ನೇಹಲ್ ಶಾಮರಾವ ಕುಲಕರ್ಣಿ ರವರ ಪಡಿತರ ಚೀಟಿಯ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ಅದರ ಮೂಲ ದಾಖಲೆಯೊಂದಿಗೆ ಹೋಲಿಕೆ ಮಾಡಿ ನೋಡಿ ಪ್ರತಿಯನ್ನು ನಿಪಿ-6 ಎಂದು ಗುರುತಿಸಿ ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಸಂತೋಷ ಶಾಮರಾವ ಕುಲಕರ್ಣಿ ರವರ ಆಧಾರ ಕಾರ್ಡನ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ಅದರ ಮೂಲ ದಾಖಲೆಯೊಂದಿಗೆ ಹೋಲಿಕೆ ಮಾಡಿ ನೋಡಿ ಪ್ರತಿಯನ್ನು ನಿಪಿ-7 ಎಂದು ಗುರುತಿಸಿ ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ನನ್ನ ಆಧಾರ ಕಾರ್ಡನ ಪ್ರತಿ ಪ್ರತಿ ಹಾಜರುಪಡಿಸಿರುತ್ತೇನೆ. ಅದನ್ನು ಅದರ ಮೂಲ ದಾಖಲೆಯೊಂದಿಗೆ ಹೋಲಿಕೆ ಮಾಡಿ ನೋಡಿ ಪ್ರತಿಯನ್ನು ನಿಪಿ-8 ಎಂದು ಗುರುತಿಸಿ ಮೂಲ ದಾಖಲೆಯನ್ನು ಸಾಕ್ಷಿಗೆ ಹಿಂದಿರುಗಿಸಲಾಯಿತು.

ಕನ್ನಡ ಪ್ರಭ ದಿನಪತ್ರಿಕೆ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-9 ಎಂದು, ಅದರಲ್ಲಿನ ಪತ್ರಿಕಾ ಪ್ರಕಟಣೆಯ ಭಾಗವನ್ನು ನಿಪಿ-9(ಎ) ಎಂದು, ಗುರುತಿಸಲಾಯಿತು.

**ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**